# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 24 ಫಿರ್ಯಾ.ಸಾ. : 15**

| | | |
|---|---|---|
| ಸಾಕ್ಷಿಯ ಹೆಸರು | : | ಸುಜಾತಾ ಮಾಧವನ್ ನಾಯರ್ |
| ತಂದೆಯ ಹೆಸರು | : | ಮಾಧವನ್ ನಾಯರ್ |
| ವಯಸ್ಸು | : | 43 ವರ್ಷ |
| ಕೆಲಸ | : | ಗೃಹಿಣಿ |
| ವಾಸ | : | ತೋಡೂರು ಕಾಲೋನಿ, ಕಾರವಾರ |

**ದಿನಾಂಕಃ 04-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ನನ್ನ ತಾಯಿಯ ಮನೆ ಕಧ್ರಾದ ರಾಜೀವನಗರದಲ್ಲಿರುತ್ತದೆ. 2015 ರಲ್ಲಿ ನನ್ನ ಮದುವೆಯಾಗಿದ್ದು, ಈಗ ನಾನು ತೋಡೂರು ಕಾಲೋನಿಯಲ್ಲಿ ವಾಸವಾಗಿರುತ್ತೇನೆ. ಮದುವೆಗೂ ಮೊದಲು ನಾನು ನನ್ನ ತಾಯಿಯ ಮನೆಯಾದ ಕಧ್ರಾದ ರಾಜೀವನಗರದಲ್ಲಿ ಇದ್ದೆನು. ಮೃತ ವೇಲು ನನಗೆ ಗೊತ್ತು, ನಮ್ಮ ಮನೆ ಹಾಗೂ ಅವರ ಮನೆ ಅಕ್ಕ-ಪಕ್ಕದಲ್ಲಿರುತ್ತದೆ. ವೇಲು ರವರ ಮನೆಯಲ್ಲಿ ವೇಲು, ಆತನ ಹೆಂಡತಿ ಜಾನಕಿ ಮತ್ತು ಮಕ್ಕಳಾದ ಸತ್ಯ ನಾರಾಯಣ ಮೂರ್ತಿ ಹಾಗೂ ಅಶ್ವಿನಿ ಇದ್ದರು. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು, ಆತ ಸಹ ಕಧ್ರಾ ವಾಸಿಯಾಗಿದ್ದು, ಆತನನ್ನು ಊರಿನಲ್ಲಿ ಎಲ್ಲರೂ ಗಿರಿ ಎಂದು ಕರೆಯುತ್ತಾರೆ. ಆತ ವೇಲು ರವರ ಮನೆಗೆ ಆಗಾಗ್ಗೆ ಬಂದು ಹೋಗುತ್ತಿದ್ದ. ವೇಲು ರವರ ಮನೆಯ ಮುಂದೆ ವಿದ್ಯುತ್ ಕಂಬ ಇದ್ದು ಅದಕ್ಕೆ ವಿದ್ಯುತ್ ಬೆಳಕಿನ ವ್ಯವಸ್ಥೆ ಇರುತ್ತದೆ. ಸದರಿ ವಿದ್ಯುತ್ ಬೆಳಕು ನಮ್ಮ ಮನೆಯ ಮುಂದೆ ಸಹ ಇರುತ್ತದೆ.

2. ದಿಃ 14-02-2014 ರಂದು ರಾತ್ರಿ 10-30 ಗಂಟೆ ಸಮಯದಲ್ಲಿ ನಾನು ನಮ್ಮ ಮನೆಯಲ್ಲಿದ್ದಾಗ, ವೇಲು ರವರ ಮನೆಯಿಂದ ಅಶ್ವಿನಿ ಮತ್ತು ಜಾನಕಿ ಕೂಗಾಡುವ ಶಬ್ದ ಕೇಳಿಸಿರುತ್ತದೆ, ಆ ನಂತರ ನಾನು ನಮ್ಮ ಮನೆಯ ಹೊರಗೆ ಬಂದು, ಜಾನಕಿಯ ಮನೆಗೆ ಕಡೆಗೆ ಹೋಗುತ್ತಿದ್ದಾಗ, ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ (ಗಿರಿ) ಜಾನಕಿಯವರ

ಮನೆಯ ಕಡೆಯಿಂದ ಕದ್ರಾ ಕಡೆಗೆ ಓಡಿ ಹೋಗುತ್ತಿದ್ದನ್ನು ನಾನು ವಿದ್ಯುತ್ ದೀಪದ ಬೆಳಕಿನಲ್ಲಿ ನೋಡಿರುತ್ತೇನೆ. ಆ ಸಮಯದಲ್ಲಿ ಆತ ಕಪ್ಪು ಬಣ್ಣದ ಟೀ ಶರ್ಟ್ ಹಾಗೂ ನೀಲಿ ಬಣ್ಣದ ಚಡ್ಡಿಯನ್ನು ಧರಿಸಿದ್ದನು. ಆತ ಈ ಮೊದಲು ವೇಲು ರವರ ಮನೆಗೆ ಬಂದು–ಹೋಗುತ್ತಿದ್ದನ್ನು ನೋಡಿದ್ದರಿಂದ, ಆತನನ್ನು ನಾನು ನೋಡಿ ಗುರುತಿಸಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

3. ವೇಲು ರವರ ಮನೆಯ ಒಳಗೆ ಕತ್ತಲು ಇದ್ದಿದ್ದರಿಂದ ನಾನು ಚಾಸಾ–26 ರವರ ಮನೆಯ ಹತ್ತಿರ ಹೋಗಿ, ಅಶ್ವಿನಿ ಮತ್ತು ಜಾನಕಿ ಕೂಗಾಡುತ್ತಿರುವ ಶಬ್ದ ಬಂದಿದ್ದು, ಹೋಗಿ ನೋಡೋಣಾ ಬನ್ನಿ, ಎಂದು ಹೇಳಿದಾಗ, ಚಾಸಾ–26 ರವರು ನನ್ನ ಬಳಿ, "ಜಾನಕಿಯು ಈಗಾಗಲೇ ನಮ್ಮ ಮನೆಯ ಹತ್ತಿರ ಹಾಗೂ ಕವಿತಾ ರವರ ಮನೆಯ ಹತ್ತಿರ ಬಂದಿದ್ದು, ನಾವು ಅವಳನ್ನು ನೋಡಿದಾಗ, ಆಕೆಯ ಕೈ ತುಂಡಾಗಿತ್ತು ಹಾಗೂ ಆಕೆಯ ಹಣೆಯ ಹತ್ತಿರ ಗಾಯವಾಗಿ ರಕ್ತ ಬರುತ್ತಿತ್ತು" ಎಂದು ಹೇಳಿರುತ್ತಾರೆ. ನಂತರ ನಾವಿಬ್ಬರೂ ಸೇರಿ ಚಾಸಾ–27 ರವರ ಮನೆಯ ಹತ್ತಿರ ಹೋದೆವು. ಅವಳೂ ಸಹ ಅದೇ ವಿಷಯವನ್ನು ತಿಳಿಸಿರುತ್ತಾಳೆ. ನಂತರ ನಾವು ಮೂರೂ ಜನ ಜಾನಕಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗೋಣ ಎಂದು ಮಾತನಾಡಿಕೊಂಡು, ಜಾನಕಿಯ ಮನೆಯ ಹತ್ತಿರ ಹೋಗಿರುತ್ತೇವೆ. ಅಷ್ಟರಲ್ಲಿ ಜಾನಕಿಯ ಮನೆಯ ಹತ್ತಿರ ಈಗಾಗಲೇ ಬಹಳಷ್ಟು ಜನರು ಸೇರಿಕೊಂಡಿದ್ದರು. ಅವರ ಮನೆಯಲ್ಲಿ ಬೆಳಕು ಇರಲಿಲ್ಲ, ಆದ್ದರಿಂದ ನಾನು, ಚಾಸಾ–27 ಹಾಗೂ ಬಹಳಷ್ಟು ಜನರು ಬ್ಯಾಟರಿ ಬಿಟ್ಟು ಮನೆಯ ಒಳಗೆ ನೋಡಿದಾಗ, ಅಶ್ವಿನಿ ಕೊಲೆಯಾಗಿ ಬಿದ್ದಿದ್ದಳು ಹಾಗೂ ಜಾನಕಿಯು ಅಶ್ವಿನಿಯ ಪಕ್ಕದಲ್ಲಿಯೇ ಕುಳಿತಿದ್ದಳು, ಅವಳ ಕೈ ತುಂಡಾಗಿತ್ತು ಹಾಗೂ ಆಕೆಯ ತಲೆಗೆ ಗಾಯವಾಗಿತ್ತು, ಸ್ಥಳದಲ್ಲಿ ರಕ್ತ ಬಿದ್ದಿತ್ತು, ಮನೆಯಲ್ಲಿ ವೇಲು ಮತ್ತು ಸತ್ಯನಾರಾಯಣ ಮೂರ್ತಿ ಕಾಣಿಸಲಿಲ್ಲ, ಪೊಲೀಸರು ಬಂದು, ಜಾನಕಿಯನ್ನು ಕೆ.ಪಿ.ಸಿ ಆಸ್ಪತ್ರೆಗೆ ಕರೆದುಕೊಂಡು ಹೋದರು, ನಂತರ ಸುಮಾರು ರಾತ್ರಿ 01–00 ಗಂಟೆ ಸಮಯದಲ್ಲಿ ಕೊಡಸಳ್ಳಿ ಕಡೆಗೆ ಹೋಗುವ ರಸ್ತೆಯಲ್ಲಿ ವೇಲು ಮತ್ತು ಆತನ ಮಗನಾದ ಸತ್ಯ ನಾರಾಯಣ ಮೂರ್ತಿ ರವರು ಕೊಲೆಯಾಗಿ, ಶವಗಳು ಬಿದ್ದಿರುತ್ತವೆ ಎಂದು ತಿಳಿದು ಬಂತು. ಆ ನಂತರ ನಾನು ಬೆಳಿಗ್ಗೆ ಕೊಡಸಳ್ಳಿ ಕಡೆಗೆ ಹೋಗುವ ಕಾಡಿನ ರಸ್ತೆಯಲ್ಲಿ ವೇಲು ಮತ್ತು ಆತನ ಮಗನಾದ ಸತ್ಯ ನಾರಾಯಣ ಮೂರ್ತಿರವರ ಶವಗಳನ್ನು ನೋಡಿರುತ್ತೇನೆ ಹಾಗೂ ಅವರನ್ನು ಕಡಿದು ಕೊಲೆ ಮಾಡಲಾಗಿತ್ತು, ಸ್ಥಳದಲ್ಲಿ ರಕ್ತ ಬಿದ್ದಿದ್ದು, ವೇಲುವಿನ ಶವದ ಪಕ್ಕದಲ್ಲಿ ಮುದ್ದೆ ಮಾಲು–13

ಊರುಗೋಲು ಬಿದ್ದಿದ್ದು, ಮುದ್ದೆ ಮಾಲನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಂತರ ಜಾನಕಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಬಾಂಬೊಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವ ವಿಷಯ ನನಗೆ ತಿಳಿದು ಬಂತು. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

4. ದಿಃ 18-02-2014 ರಂದು ಕದ್ರಾ ಪೊಲೀಸರು ನನ್ನನ್ನು ಠಾಣೆಗೆ ಕರೆದಿದ್ದು, ಅದರಂತೆ ನಾನು ಕದ್ರಾ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಅಲ್ಲಿ ಪೊಲೀಸರು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ತೋರಿಸಿದ್ದು, ನಾನು ಆತನನ್ನು ನೋಡಿ ಗುರುತಿಸಿರುತ್ತೇನೆ.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶವನ್ನು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ